ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 22-03-2021 ಪ್ರಶ್ನೆ ಸಂಖ್ಯೆ : 1578 (1819)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಹೆಚ್.ಎಂ.ರಮೇಶಗೌಡ(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 22-03-2021

ಉತ್ತರಿಸುವ ಸಚಿವರು : ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಷಯ : ರಾಜ್ಯದಲ್ಲಿ ಇರುವ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣ ಕುರಿತು

(ಅ) ರಾಜ್ಯದಲ್ಲಿರುವ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು; (ತಾಲ್ಲೂಕುವಾರು ಸರ್ವೆ ನಂ. ಸಹಿತ ವಿಸ್ತೀರ್ಣದ ವಿವರ ಒದಗಿಸುವುದು)

(ಆ) ಅರಣ್ಯ ಪ್ರದೇಶದ ಜಮೀನನ್ನು ಎಷ್ಟು ಮಂದಿ ರೈತರು ಒತ್ತುವರಿ ಮಾಡಿಕೊಂಡಿದ್ದಾರೆ ; (ತಾಲ್ಲೂಕುವಾರು, ಹೋಬಳಿ, ಗ್ರಾ.ಸ. ನಂ. ವಿಸ್ತೀರ್ಣ ಸಹಿತ ಒತ್ತುವರಿ ಪೂರ್ಣ ಮಾಹಿತಿ ಒದಗಿಸುವುದು)

(ಇ) ಒತ್ತುವರಿ ಮಾಡಿಕೊಂಡಿರುವ ರೈತರುಗಳಿಗೆ ಸರ್ಕಾರ ವಿಧಿಸಿರುವ ದಂಡದ ಮೊತ್ತವೆಷ್ಟು ; (ತಾಲ್ಲೂಕುವಾರು, ಹೋಬಳಿ, ಗ್ರಾ.ಸಂ.ನಂ. ವಿಸ್ತೀರ್ಣ ಸಹಿತ ಒತ್ತುವರಿ ಮಾಹಿತಿ ಒದಗಿಸುವುದು)

(ಈ) ಹಲವಾರು ವರ್ಷಗಳಿಂದ ಒತ್ತುವರಿ ಭೂಮಿಯನ್ನೇ ನಂಬಿ ಜೀವನ ಸಾಗಿಸುತ್ತಿರುವ ಬಡ ಕುಟುಂಬಗಳ ರೈತರುಗಳಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆಯೇ ಅಥವಾ ಮಾಡಲಾಗುವುದೇ ;

(ಉ) ರಾಜ್ಯದಲ್ಲಿ ಭೂ ಮಂಜೂರಾತಿ ನೀಡಲಾಗಿರುವ ಒತ್ತುವರಿದಾರರ ಸಂಖ್ಯೆ ಎಷ್ಟು ?(ವಿಧಾನ ಸಭಾ ಕ್ಷೇತ್ರವಾರು ಒತ್ತುವರಿದಾರರ ಹೆಸರು, ಗ್ರಾಮ, ಹೋಬಳಿವಾರು, ತಾಲ್ಲೂಕು, ಸ. ನಂ. ವಿಸ್ತೀರ್ಣ ಹಾಗೂ ಮಂಜೂರಾತಿ ಪತ್ರದ ನಕಲು ಸಹಿತ ಮಾಹಿತಿ ಒದಗಿಸುವುದು)